**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ</u>**

**<u>ಸಿ.ಸಿ. ನಂ.389/2012</u>**

**ಸಿ.ಡಬ್ಲ್ಯೂ-2 ಪಿ.ಡಬ್ಲ್ಯೂ-2**

| | | |
|---|---|---|
| ಸಾಕ್ಷಿದಾರರ ಹೆಸರು | : | ಜಯಕುಮಾರ್ |
| ತಂದೆಯ/ ಗಂಡನ ಹೆಸರು | : | ಪೂಣಜ್ಜ |
| ವಯಸ್ಸು | : | 69 ವರ್ಷ |
| ಉದ್ಯೋಗ | : | ನಿವೃತ್ತ DRFO |
| ವಾಸ ಸ್ಥಳ | : | ಹುಣಸೂರು |

**<u>ದಿನಾಂಕ 27.09.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ನಾನು ಸುಮಾರು 20 ವರ್ಷಗಳ ವರೆಗೂ ಅಂತರಸಂತೆ ವಲಯದಲ್ಲಿ ವಲಯ ಅರಣ್ಯ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 15.04.2011 ರಂದು ಸಂಜೆ 6 ಗಂಟೆ ಸಮಯದಲ್ಲಿ ವನ್ಯಜೀವಿ ಅರಣ್ಯ ವಲಯ ಉದುಬ್ಬಾರು ಗಸ್ತುನ ಎನ್ ಬೇಳ್ತೂರು ಮಾಳದ ಹಾಡಿ ರಸ್ತೆಯಲ್ಲಿ ಕಾಯುತ್ತಿರುವಾಗ 03 ಜನ ಆಸಾಮಿಗಳು ಆನೆ ಕಂದಕದ ಕಾಲುದಾರಿಯಲ್ಲಿ ನಡೆದುಕೊಂಡು ಬರುತ್ತಿದ್ದು, ನಾನು ಮತ್ತು ಸಿಬ್ಬಂದಿಗಳು ಹಿಡಿದುಕೊಳ್ಳಲು ಪ್ರಯತ್ನಿಸಿದಾಗ ಒಬ್ಬರು ತಪ್ಪಿಸಿಕೊಂಡಿದ್ದು ಇಬ್ಬರನ್ನು ಹಿಡಿದುಕೊಂಡಿರುತ್ತೇನೆ. ಅವರ ಹೆಸರನ್ನು ವಿಚಾರಿಸಲಾಗಿ ಚಂದ್ರ ಮತ್ತು ಕುಳ್ಳಯ್ಯ ಎಂದು ತಿಳಿಸಿರುತ್ತಾರೆ. ಓಡಿ ಹೋದವರ ಹೆಸರು ರಾಮ ಎಂದು ತಿಳಿಸಿರುತ್ತಾರೆ. ಅವರನ್ನು ಪರಿಶೀಲಿಸಿದಾಗ

ಆರೋಪಿ-1 ರವರು ಒಂದು ಕಪ್ಪು ಪ್ಲಾಸ್ಟಿಕ್ ಕವರ್ ಇದ್ದು ಅದನ್ನು ಪರಿಶೀಲಿಸಿದಾಗ ಸುಮಾರು ಒಂದು ಕೆ.ಜಿ ಯಷ್ಟು ಮೂಳೆ ಇದ್ದು ಅದನ್ನು ವಿಚಾರಿಸಿದಾಗ ಚಿರತೆಯ ಮೂಳೆ ಇದ್ದು, ಜೇಬಿನಲ್ಲಿ 1 ಪ್ಯಾಕೆಟ್ ಇದ್ದು ಅದರಲ್ಲಿ 5 ಚಿರತೆ ಉಗುರು ಮತ್ತು 2 ಕೋರೆ ಹಲ್ಲುಗಳು ಇದ್ದು, ಸದರಿ ಸ್ಥಳದಲ್ಲಿ ಮಹಜರು ಕ್ರಮ ಜರುಗಿಸಿ ಅವುಗಳನ್ನು ಅಮಾನತು ಪಡಿಸಿಕೊಂಡಿರುತ್ತೇವೆ. ಅಮಾನತು ಪಂಚನಾಮೆ ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ 1 ಬಿ ಎಂದು ಗುರುತಿಸಲಾಯಿತು. ನಂತರ ಅರಣ್ಯ ಮೊಕದ್ದಮೆ ದಾಖಲು ಮಾಡಿಕೊಂಡು ಸ್ವತ್ತು ಅಮಾನತು ವರದಿ ತಯಾರಿಸಿರುತ್ತೇನೆ. ಮೂಳೆಗಳನ್ನು ಎಲ್ಲಿಂದ ತಂದಿರುತ್ತೀರಿ ಎಂದು ವಿಚಾರಿಸಿದಾಗ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೊಳೆಯೂರು ವಲಯದ ಸೀಗೇವಾಡಿ ಕೊಳಚೆ ಹತ್ತಿರ ಸುಮಾರು 6 ತಿಂಗಳ ಹಿಂದೆ ದನ ಮೇಯಿಸುತ್ತಿದ್ದಾಗ ಚಿರತೆ ಸತ್ತು ಕೊಳೆತಿದ್ದು ಅಲ್ಲಿಂದ ತಂದಿರುತ್ತೇವೆ ಎಂದು ತಿಳಿಸಿರುತ್ತಾರೆ. ಆರೋಪಿಯನ್ನು ನೋಡಿ ಗುರುತಿಸುತ್ತೀರಾ ಎಂದರೆ ಮರೆತು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 2 ರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು. ಸದರಿ ವಿಚಾರವಾಗಿ ನಾನು ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಅಭಿಯೋಜಕರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

ತಪ್ಪಿಸಿಕೊಂಡ ಆರೋಪಿ ಬಳಿ ಅರಣ್ಯದಿಂದ ಹಿಡಿದು ತಂದ ಒಂದು ಗೂಬೆ ಇರುತ್ತದೆ ಎಂದರೆ ಸರಿ. ಅಮಾನತ್ತುಪಡಿಸಿಕೊಂಡ ಮುದ್ದೆಮಾಲುಗಳನ್ನು ಬಾಸ್ಕರ್ ಎಂಬ ವ್ಯಕ್ತಿ ಕೊಂಡುಕೊಳ್ಳುವ ಸಲುವಾಗಿ ಸದರಿ ಸ್ಥಳ ಕ್ಕೆ ಬರಲು ತಿಳಿಸಿದ್ದು ಒಂದು ಉಗುರಿಗೆ 2 ಸಾವಿರ, ಮೂಳೆಗಳಿಗೆ 5 ಸಾವಿರ, ಗೂಬೆಗೆ 25 ಸಾವಿರ ದಂತೆ ಮಾತುಕತೆ ಆಗಿದ್ದು, ಮಾರಟ ಮಾಡುವ ಉದ್ದೇಶದಿಂದ ತೆಗೆದುಕೊಂಡು ಬಂದಿರುತ್ತೇವೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ನಂತರ ದಿಃ14.06.2012 ರಂದು ಚಿರತೆ ಸತ್ತಿದ ಸ್ಥಳದಲ್ಲಿ ಸ್ಥಳ ಮಹಜರ ಜರುಗಿಸಿರುತ್ತೇವೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಬಾಸ್ಕರ್ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲು:- ಆರೋಪಿ ಪರ ವಕೀಲರಿಂದ :-**

ಚಾಸಾ 1 ರವರಿಗೆ ಸಂಜೆ 5 ಗಂಟೆ ಸಮಯದಲ್ಲಿ ಮಾಹಿತಿ ಬಂದಿರುತ್ತದೆ. ಸದರಿ ವಿಚಾರವನ್ನು ನಮಗೆ 5.15 ರಲ್ಲಿ ತಿಳಿಸಿರುತ್ತಾರೆ. ಸದರಿ ದಿನ 5.30 ಗಂಟೆಗೆ ಕಛೇರಿ ಬಿಟ್ಟು ಸ್ಥಳ ಕ್ಕೆ 6 ಗಂಟೆಗೆ ಹೋಗಿರುತ್ತೇವೆ. ಸದರಿ ದಿನ ನಾನು, ಚಾಸಾ 1 ಮತ್ತು 4 ರವರು ಇಲಾಖಾ ಜೀಪ್ ನಲ್ಲಿ ಹೋಗಿರುತ್ತೇವೆ. ನನ್ನ ಹೇಳಿಕೆಯಲ್ಲಿ ಇಲಾಖಾ ಜೀಪ್ ನಲ್ಲಿ ಹೋಗಿರುತ್ತೇವೆ ಎಂದು ಹೇಳಿರುವುದಿಲ್ಲ. ಎನ್ ಬೆಳ್ತೂರು ಗೇಟ್ ಯಿಂದ ಕಛೇರಿ 4 ಕಿ.ಮೀ ಆಗುತ್ತದೆ. ವಾಹನವನ್ನು ನಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಚಾಲಕ ರಾಜಣ್ಣ ಎಂಬುವವರು ಚಾಲನೆ ಮಾಡಿಕೊಂಡು ಬಂದಿರುತ್ತಾರೆ. ಎನ್ ಬೆಳ್ತೂರು ಗೇಟ್ ಯಿಂದ ಮಾಳದಹಾಡಿ ಹೋಗುವ ಕಾಲುದಾರಿಯಲ್ಲಿ ಕಾಯುತ್ತಿದ್ದೆವು. ಆರೋಪಿಯನ್ನು ಮೊದಲು ಚಾಸಾ 1 ನೋಡಿರುತ್ತಾರೆ. 30 ಅಡಿ ಅಂತರದಿಂದ ಆರೋಪಿಯನ್ನು ನೋಡಿರುತ್ತೇನೆ. ಒಬ್ಬ ಆಸಾಮಿಗಳು ಓಡಿ ಹೋಗಿದ್ದು, ಇಬ್ಬರನ್ನು ಹಿಡಿದಿರುತ್ತೇನೆ. ತಪ್ಪಿಸಿಕೊಂಡ ಆರೋಪಿಯನ್ನು ಹಿಡಿಯಲು ಪ್ರಯತ್ನಪಟ್ಟಿರುತ್ತೀರಾ ಎಂದರೆ ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತರ ಚಹರೆಯನ್ನು ಹೇಳಿಕೆಯಲ್ಲಿ ಹೇಳಿರುವುದಿಲ್ಲ.

2 ನೇ ಆರೋಪಿ ಕೈಯಲ್ಲಿ ಕವರ್ ಇತ್ತು, ಎಂದು ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಆರೋಪಿತರ ಬಳಿ ಮುದ್ದೆಮಾಲುಗಳನ್ನು ವಶಪಡಿಸಿಕೊಳ್ಳುವ ಸಮಯದಲ್ಲಿ ವೀಡಿಯೋ ಚಿತ್ರೀಕರಣ ಮಾಡಿರುವುದಿಲ್ಲ. ಸದರಿ ಮುದ್ದೆಮಾಲುಗಳನ್ನು ವಶಪಡಿಸಿಕೊಳ್ಳುವ ಸಮಯದಲ್ಲಿ ಪೋಟೋ ತೆಗೆದಿರುತ್ತೇವೆ. ನನ್ನ ಹೇಳಿಕೆಯಲ್ಲಿ ಯಾವ ಪ್ರಾಣಿಯ ಮೂಳೆ ಎಂದು ನಿಖರವಾಗಿ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿ ಬಳಿ ಯಾವುದೇ ರೀತಿ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಿರತೆ ಕೊಳೆತು ಬಿದ್ದ ಸ್ಥಳದಲ್ಲಿ ಪೋಟೋ ತೆಗೆದಿಲ್ಲ. ಸದರಿ ಸ್ಥಳದಲ್ಲಿ ಮಹಜರ ಮಾಡಿ ಏನಾದರೂ ವಶಪಡಿಸಿಕೊಂಡಿರುತ್ತೀರಾ ಎಂದರೆ ಕುರುಹುಗಳು ಏನು ಕಂಡುಬಂದಿರಲಿಲ್ಲ ಎಂದು ನುಡಿಯುತ್ತಾರೆ. ಸ್ಥಳದಲ್ಲಿ ನಾನು ಯಾವುದೇ ಮಹಜರ ಮಾಡಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅನೈಸರ್ಗಿಕವಾಗಿ ಮೃತಪಟ್ಟ ಪ್ರಾಣಿಗಳ ಮೂಳೆ ಮತ್ತು ಉಗುರುಗಳನ್ನು ನಮ್ಮ ಕಛೇರಿಯಲ್ಲಿ ಇಟ್ಟುಕೊಂಡು ಆರೋಪಿತರ ವಿರುದ್ಧ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ 3 ಮತ್ತು 4 ಕಛೇರಿಯಲ್ಲಿ ತೆಗೆದ

ಪೋಟೋಗಳು ಎಂದರೆ ಸರಿ. ನಿಪಿ 3 ಮತ್ತು 4 ನ್ನು ಕೇಸಿಗಾಗಿ ಸೃಷ್ಟಿಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**